**ದಿನಾಂಕಃ01.08.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಬಿ ಕೆ ವಕೀಲರಿಂದಃ**

ರೇಡಿಯಾಲಾಜಿಕಲ್ ಬಿಲ್ಲನ್ನು ನಿಪಿ-17 ಎಂದು, ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ನಿಪಿ-18 ಎಂದು, ಎಕ್ಸ್ ರೇಗಳನ್ನು ನಿಪಿ-19 ಮತ್ತು 20 ಎಂದು ಗುರುತಿಸಲಾಯಿತು.

**ಪಾಟೀ ಸವಾಲು 3 ನೇ ಎದುರುದಾರರ ಪರ ಶ್ರೀ ಬಿ ಎಂ ಆರ್ ಸಿ ವಕೀಲರಿಂದಃ**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ಈ ದಿನ ಆಧಾರ್ ಕಾರ್ಡ್ ತಂದಿದ್ದೇನೆ. ಸದರಿ ಆಧಾರ್ ಕಾರ್ಡ್ ಮಾಡಿಸಿ 10 ವರ್ಷಗಳಾಗಿರಬಹುದು. ಸದರಿ ಆಧಾರ್ ಕಾರ್ಡ್ ನಲ್ಲಿ ಹೆಸರು, ತಂದೆ ಹೆಸರು , ವಿಳಾಸ ನಮೂದಾಗಿದೆ ಎಂದರೆ ನಿಜ. ನನ್ನ ಆಧಾರ್ ಕಾರ್ಡ್ ಪ್ರಕಾರ ನನ್ನ ಜನ್ಮ ದಿನಾಂಕ 01.01.0963 ಎಂದು ನಮೂದು ಇದೆ ಎಂದರೆ ನಿಜ. ಗಾಯಗೊಂಡ ದಿನದಂದು ನಾನು ನನ್ನ ಜಮೀನಿನಲ್ಲಿ ಇದ್ದೆ. ನನ್ನ ಜಮೀನಿಗೂ ಸಾರ್ವಜನಿಕ ರಸ್ತೆಗೂ ½ ಕಿ.ಮೀ ದೂರ ಇದೆ. ಅಪಘಾತವಾದ ಜಾಗ ನಮ್ಮ ಸ್ವಂತ ಹೊಲ ಎಂದರೆ ನಿಜ. ಸದರಿ ಜಮೀನಿನಲ್ಲಿ ಮೆಕ್ಕೇಜೋಳ ಬೆಳೆಯುತ್ತಿದ್ದೆವು. ಜಮೀನಿನ ಸರ್ವೆ ನಂ.8 ಆಗಿದೆ. ನಿಪಿ-15 ಜಯರಾಮಣ್ಣ ಬಿನ್ ಕಿವುಡು ರಾಮಯ್ಯನಿಗೆ ಸೇರಿದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಜಯರಾಮಣ್ಣ ಎಂದರೆ ನನ್ನ ತಂದೆ ಎಂದು ನುಡಿಯುತ್ತಾರೆ . ನನ್ನ ತಂದೆ ಮೃತ ಪಟ್ಟು 8 ವರ್ಷಗಳಾಗಿದೆ. ನನ್ನ ತಂದೆ ಮೃತ ಪಟ್ಟ ನಂತರ ಪೌತಿಖಾತೆ ಮೂಲಕ ವಾರಸುದಾರರಿಗೆ ಖಾತೆಯಾಗಿದೆ ಎಂದರೆ ನಿಜ. ಪೌತಿ ಖಾತೆಯಾದ ನಂತರ ನನ್ನ ಹೆಸರು ನಮೂದು ಮಾಡಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಈಗ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಸಣ್ಣಮ್ಮ ಎಂದರೆ ನನ್ನ ಚಿಕ್ಕಪ್ಪನ ಹೆಂಡತಿ, ತಿಮ್ಮಕ್ಕ ನನ್ನ ದೊಡ್ಡಪ್ಪನ ಮಗಳು ರಂಗಸ್ವಾಮಿ ನನ್ನ ದೊಡ್ಡಪ್ಪನ ಮಗ. ಸದರಿ ಜಮೀನು ಭೂಸ್ವಾದೀನ ಆಗಿದೆ ಎಂದರೆ ನಿಜ. ಸರ್ಕಾರದಿಂದ ಎಲ್ಲಾ ವಾರಸುದಾರರಿಗೆ ಪರಿಹಾರ ನೀಡಿದ್ದಾರೆ ಎಂದರೆ ಸಾಕ್ಷಿ ಪರಿಹಾರ ನೀಡಿದ್ದಾರೆ ಆದರೆ ನಮಗೆ ಇನ್ನೂ ಬಂದಿಲ್ಲ ಎಂದು ನುಡಿಯುತ್ತಾರೆ.

ಉಳಿದ ಸರ್ವೆ ನಂಬರ್ ಕೂಡ ತುಮಕೂರು-ಚಿತ್ರದುರ್ಗ ರೈಲ್ವೆ ಯೋಜನೆಗೆ ಭೂಸ್ವಾದೀನ ಆಗಿದೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ಪಹಣಿಗಳು 2020-21 ಎಂದರೆ ನಿಜ. ಆ ಜಮೀನುಗಳು ಖುಷ್ಕಿ ಆಧಾರಿತ ಜಮೀನು ಎಂದರೆ ನಿಜ. ಪಹಣಿಯಲ್ಲಿ ಆ ಜಮೀನಿನಲ್ಲಿ ಬೆಳೆ ಬೆಳೆದ ಬಗ್ಗೆ ನಮೂದಾಗಿಲ್ಲ ಎಂದರೆ ನಿಜ. ಟ್ರಾಕ್ಟರ್ ಹಿಂಭಾಗದಲ್ಲಿ ಜೋಡಿಸಿದ ಜೋಳದ ತೆನೆ ಕಟ್ ಮಾಡಲು ಸೇರಿಸೀದ ಮಿಷನ್ ನನಗೆ ಬಂದು ತಾಗಿ ಗಾಯಗಳು ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಟ್ರಾಕ್ಟರ್ ಹಿಂದಿನಿಂದ ನನಗೆ ಗುದ್ದಿ ಗಾಯಗಳು ಆಗಿವೆ ಎಂದು ನುಡಿಯುತ್ತಾರೆ.

ಅಪಘಾತವಾದ ನಂತರ ಹಿರಿಯೂರು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿ ನಾನು ವೈದ್ಯರಿಗೆ ಅಪಘಾತ ಯಾವ ರೀತಿ ಆಗಿದೆ ಎಂದು ತಿಳಿಸಿರುತ್ತೇನೆ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ ದಾಖಲೆಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ನಿಪಿ-1 ರ ದಾಖಲಾತಿಯಲ್ಲಿ ಜೋಳದ ತೆನೆ ಕಟ್ ಮಾಡುವ ಮಿಷನ್ ನಿಂದ ನನಗೆ ಗಾಯಗಳು ಆಗಿವೆ ಎಂದು ನಮೂದು ಮಾಡಲಾಗಿದೆ ಎಂದರೆ ನಿಜ. ಹಿರಿಯೂರು ಸರ್ಕಾರಿ ಆಸ್ಪತ್ರೆಯ ನಂತರ ಚಿತ್ರದುರ್ಗದ ಆಸ್ಪತ್ರೆಗೆ ಹೋಗಿರುತ್ತೇನೆ ನನಗೆ ಚಿತ್ರದುರ್ಗದ ಮಲ್ಟಿ ಸ್ಪೆಷಲಿಸ್ಟ್ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ ದಿಃ08.12.2021 ರ ನಂತರ 10.06.2024 ರ ವರೆಗೆ ನಾನು ಯಾವುದೇ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ.

ನನಗೆ ಹೆಚ್ಚಿನ ವಯಸ್ಸಾಗಿದ್ದು ನನಗೆ ದುಡಿಮೆ ಮಾಡುವ ಶಕ್ತಿ ಇಲ್ಲದೇ ಇರುವುದರಿಂದ ನಾನು ಯಾವುದೇ ಕೆಲಸ ಮಾಡಿ ದುಡಿಮೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನಗೆ ವಾರ್ಷಿಕ ರೂ.3 ಲಕ್ಷ ದುಡಿಮೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಕುರಿ ಸಾಕಾಣಿಕೆಯಿಂದ ರೂ. 25 ಸಾವಿರ ದುಡಿಮೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಔಷದೋಪಚಾರಕ್ಕೆ ರೂ.6 ಲಕ್ಷ ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ಸಾರ್ವಜನಿಕ ರಸ್ತೆಯಲ್ಲಿ ಆಗಿರುವುದರಿಂದ 3 ನೇ ಎದುರುದಾರರು

ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಟ್ರಾಕ್ಟರ್ ಚಾಲಕನ ಯಾವುದೇ ನಿರ್ಲಕ್ಷ ಇರುವುದಿಲ್ಲ ನಾನೇ ಹೋಗಿ ಟ್ರಾಕ್ಟರ್ ಗೆ ಡಿಕ್ಕಿ ಪಡಿಸಿಕೊಂಡು ಅಪಘಾತ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**1 ನೇ ಎದುರುದಾರರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸ ಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು